**Akashvani : Bangalore**
**National Bulletin In Kannada**
**09.04.2025 / 7.35 am**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**09.04.2025 / 7.35 am**

**<><*<><>*><>**

ಮುಖ್ಯಾಂಶಗಳು

**೧. ವಕ್ಫ್ ತಿದ್ದುಪಡಿ ಮಸೂದೆ-೨೦೨೫ ಅನ್ನು ಸಂಸತ್ತು ಅಂಗೀಕರಿಸಿರುವುದು ಸಾಮಾಜಿಕ ನ್ಯಾಯದತ್ತ ಮಹತ್ವದ ಹೆಜ್ಜೆ - ಪ್ರಧಾನಿ ನರೇಂದ್ರ ಮೋದಿ**

**೨. ಪೋರ್ಚುಗಲ್ ಪ್ರವಾಸ ಸಂಪನ್ನಗೊಳಿಸಿ, ಸ್ಲೋವಾಕಿಯಾಗೆ ತೆರಳಿದ ರಾಷ್ಟ್ರಪತಿ ದ್ರೌಪದಿ ಮುರ್ಮು**

**೩. ಕೃತಕ ಬುದ್ಧಿಮತ್ತೆಯೇ ಹೊಸ ಕೈಗಾರಿಕಾ ಕ್ರಾಂತಿ - ಕೇಂದ್ರ ಸಚಿವ ಅಶ್ವಿನಿ ವೈಷ್ಣವ್**

**೪. ಐಎಸ್ಎಸ್ಎಫ್ ಶೂಟಿಂಗ್ ವಿಶ್ವಕಪ್; ಪುರುಷರ ಹಾಗೂ ಮಹಿಳಾ ವಿಭಾಗದ ಪ್ರತ್ಯೇಕ ಸ್ಪರ್ಧೆಗಳಲ್ಲಿ ಭಾರತಕ್ಕೆ ಚಿನ್ನ**

**೫. ಐಪಿಎಲ್ ಟಿ-೨೦ ಕ್ರಿಕೆಟ್; ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಪಂಜಾಬ್ ಕಿಂಗ್ಸ್‌ಗೆ ೧೮ ರನ್‌ಗಳ ಜಯ**

**<><*<><>*><>**

ವಕ್ಫ್ ತಿದ್ದುಪಡಿ ಮಸೂದೆ-೨೦೨೫ ಅನ್ನು ಸಂಸತ್ತು ಅಂಗೀಕರಿಸಿರುವುದು ಸಾಮಾಜಿಕ ನ್ಯಾಯದತ್ತ ಒಂದು ಮಹತ್ವದ ಹೆಜ್ಜೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಖಾಸಗಿ ಸುದ್ದಿವಾಹಿನಿಗೆ ನೀಡಿದ್ದ ಸಂದರ್ಶನದಲ್ಲಿ ಮಾತನಾಡಿದ ಅವರು, ಮುಸ್ಲಿಂಮರು ಸೇರಿದಂತೆ ಎಲ್ಲಾ ಸಮುದಾಯದ ಹಿತಾಸಕ್ತಿಗಳನ್ನು ಈ ಕಾನೂನು ಪೂರೈಸುತ್ತದೆ. ಇದರ ಮೂಲಕ ವಕ್ಫ್ ಪಾವಿತ್ರತೆಯನ್ನು ಹಾಗೂ ಮಹಿಳೆಯರ ಮತ್ತು ಹಕ್ಕುಗಳನ್ನು ಸಂರಕ್ಷಿಸಲಾಗುವುದು ಎಂದು ಹೇಳಿದರು.

ಹಲವು ಜಾಗತಿಕ ಸವಾಲುಗಳ ಹೊರತಾಗಿ ಭಾರತ, ಕಳೆದ ಒಂದು ದಶಕದಲ್ಲಿ ವೇಗವಾಗಿ ಬೆಳವಣಿಗೆ ಸಾಧಿಸಿದ್ದು, ತನ್ನ ಆರ್ಥಿಕತೆ ಗಾತ್ರವನ್ನು ದ್ವಿಗುಣಗೊಳಿಸಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಧಾನಿ ಭಾರತದಾದ್ಯಂತ ಆಯ್ದ ಯುವಕರು ಮತ್ತು ಕಾಲೇಜುಗಳು ಅಭಿವೃದ್ಧಿಪಡಿಸಿದ ಪರಿಹಾರಗಳು ಮತ್ತು ಪರಿಕಲ್ಪನೆಗಳ ಸಂಕಲನವಾದ 'ಸಮಾಧಾನ್' ದಾಖಲೆಯನ್ನು ಅನಾವರಣಗೊಳಿಸಿದರು.

**<><*<><>*><>**

ನವದೆಹಲಿಯಲ್ಲಿಂದು ನಡೆಯಲಿರುವ ನವಕರ್ ಮಹಾಮಂತ್ರ ದಿವಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ನವಕರ್ ಮಹಾಮಂತ್ರ ದಿವಸ್ ಎಂಬುದು, ಜೈನ ಧರ್ಮದ ನವಕರ್ ಮಹಾಮಂತ್ರದ ಸಾಮೂಹಿಕ ಪಠಣದ ಮೂಲಕ ಜನರನ್ನು ಒಗ್ಗೂಡಿಸಲು ಪ್ರಯತ್ನಿಸುವ ಆಧ್ಯಾತ್ಮಿಕ ಸಾಮರಸ್ಯ ಮತ್ತು ನೈತಿಕ ಪ್ರಜ್ಞೆಯ ಸ್ಮರಣೀಯ ಆಚರಣೆಯಾಗಿದೆ. ಅಹಿಂಸೆ, ನಮ್ರತೆ ಮತ್ತು ಆಧ್ಯಾತ್ಮಿಕ ಉನ್ನತಿಯ ತತ್ವಗಳಲ್ಲಿ ಬೇರೂರಿರುವ ಈ ಮಂತ್ರವು ಜೀವಿಗಳ ಸದ್ಗುಣಗಳಿಗೆ ಗೌರವ ಸಲ್ಲಿಸುತ್ತದೆ ಮತ್ತು ಆಂತರಿಕ ಪರಿವರ್ತನೆಗೆ ಪ್ರೇರಣೆ ನೀಡುತ್ತದೆ. ಈ ದಿನ ಎಲ್ಲಾ ವ್ಯಕ್ತಿಗಳು ಸ್ವಯಂ ಶುದ್ಧೀಕರಣ, ಸಹಿಷ್ಣುತೆ ಮತ್ತು ಸಾಮೂಹಿಕ ಯೋಗಕ್ಷೇಮದ ಮೌಲ್ಯಗಳನ್ನು ಪ್ರತಿಬಿಂಬಿಸಲು ಪ್ರೋತ್ಸಾಹಿಸುತ್ತದೆ. ೧೦೮ ಕ್ಕೂ ಹೆಚ್ಚು ದೇಶಗಳ ಜನರು ಶಾಂತಿ ಮತ್ತು ಒಗ್ಗಟ್ಟಿನ ಈ ಜಾಗತಿಕ ಮಂತ್ರಕಾಗಿ ಒಟ್ಟುಗೂಡಲಿದ್ದಾರೆ.

**<><*<><>*><>**

ತಮ್ಮ ಪೋರ್ಚುಗಲ್ ಪ್ರವಾಸವನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿದ ನಂತರ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಮುಂಜಾನೆ ಸ್ಲೋವಾಕಿಯಾ ರಾಜಧಾನಿ ಬ್ರಾಟಿಸ್ಲವಾಗೆ ಆಗಮಿಸಿದರು. ೨೭ ವರ್ಷಗಳಲ್ಲಿ ಭಾರತದ ರಾಷ್ಟ್ರಪತಿ ಒಬ್ಬರು ಮೊದಲ ಬಾರಿಗೆ ಪೋರ್ಚುಗಲ್ ಭೇಟಿ ನೀಡುತ್ತಿದ್ದಾರೆ. ರಾಷ್ಟ್ರಪತಿ ಭೇಟಿ ಕುರಿತು ಸುದ್ದಿಗಾರಿಗೆ ಮಾಹಿತಿ ನೀಡಿರುವ ವಿದೇಶಾಂಗ ವ್ಯವಹಾರಗಳ

ಸಚಿವಾಲಯದ ಪಶ್ಚಿಮ ವಲಯದ ಕಾರ್ಯದರ್ಶಿ ತನ್ಮಯ್‌ಲಾಲ್, ಪೋರ್ಚುಗಲ್ ಪ್ರಧಾನಿ ಲೂಹಿಸ್ ಮಾಂಟೆನೆಗ್ರೊ ಅವರೊಂದಿಗೆ ರಾಷ್ಟ್ರಪತಿಗಳು ನಡೆಸಿದ ಸಭೆ ಫಲಪ್ರದವಾಗಿದೆ ಎಂದು ಹೇಳಿದ್ದಾರೆ.

<><*<><>*><>

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ನೇಪಾಳದಲ್ಲಿ ಇಂದು ನಡೆಯಲಿರುವ ೩ನೇ ಬಿಮ್‌ಸ್ಟೆಕ್ ಕೃಷಿ ಸಚಿವರ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಕೃಷಿ ಸಚಿವಾಲಯ ತಿಳಿಸಿದೆ.

ಶಿವರಾಜ್ ಸಿಂಗ್ ಚೌಹಾಣ್ ಅವರು, ನೇಪಾಳ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಹಾಗೂ ಕೃಷಿ ಮತ್ತು ಜಾನುವಾರು ಅಭಿವೃದ್ಧಿ ಸಚಿವ ರಾಮನಾಥ್ ಅಧಿಕಾರಿ ಅವರನ್ನು ಭೇಟಿ ಮಾಡಲಿದ್ದಾರೆ ಎಂದು ತಿಳಿಸಿದೆ. ತಮ್ಮ ಭೇಟಿಯ ಸಮಯದಲ್ಲಿ ಅವರು, ಕೃಷಿ ಕ್ಷೇತ್ರದಲ್ಲಿ ಸಹಕಾರದ ಕುರಿತು ಉಭಯ ರಾಷ್ಟ್ರಗಳ ನಡುವಿನ ತಿಳುವಳಿಕಾ ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ. ಬಳಿಕ ಸಚಿವರು ಭೂತಾನಿನ ಕೃಷಿ ಮತ್ತು ಜಾನುವಾರು ಸಚಿವರೊಂದಿಗೆ ದ್ವಿಪಕ್ಷೀಯ ಸಭೆಯನ್ನು ಸಹ ನಡೆಸಲಿದ್ದಾರೆ.

<><*<><>*><>

ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆ ಇಂದು ಮುಕ್ತಾಯಗೊಳ್ಳಲಿದೆ. ರೆಪೊ ದರದ ಜೊತೆಗೆ, ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಬೆಳವಣಿಗೆ ದರ, ಹಣದುಬ್ಬರದ ಸ್ಥಿತಿ, ಸಿಪಿಐ ಹಣದುಬ್ಬರ ಮತ್ತು ಭಾರತೀಯ ಆರ್ಥಿಕತೆಯ ಜಿಡಿಪಿ ಬೆಳವಣಿಗೆಯ ಮುನ್ನೋಟದ ಬಗ್ಗೆಯೂ ಮಾತನಾಡಲಿದ್ದಾರೆ. ಹಣಕಾಸು ನೀತಿ ಸಮಿತಿ ಸಭೆ ಏಪ್ರಿಲ್ ೭ ರಂದು ಪ್ರಾರಂಭವಾಯಿತು. ಆರ್‌ಬಿಐ ಪ್ರಕಟಣೆಯನ್ನು ಆರ್‌ಬಿಐನ ಅಧಿಕೃತ ಯುಟ್ಯೂಬ್ ಚಾನೆಲ್‌ನಲ್ಲಿ ನೇರಪ್ರಸಾರ ಮಾಡಲಾಗುತ್ತಿದೆ. ಪ್ರಮುಖ ಘೋಷಣೆಯ ನಂತರ, ಆರ್‌ಬಿಐ ಗವರ್ನರ್ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ.

<><*<><>*><>

ಕೃತಕ ಬುದ್ಧಿಮತ್ತೆಯೇ ಹೊಸ ಕೈಗಾರಿಕಾ ಕ್ರಾಂತಿಯಾಗಿದೆ ಎಂದು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ದೆಹಲಿಯಲ್ಲಿ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ-ಯುಐಡಿಎಐ, ಆಯೋಜಿಸಿದ್ದ ಪಾಲುದಾರರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದೊಂದಿಗೆ ಕೃತಕಬುದ್ಧಿಮತ್ತೆಯನ್ನು ಸಂಯೋಜಿಸುವ ಕುರಿತು ಪಾಲುದಾರರು ವಿಚಾರಗಳನ್ನು ಹಂಚಿಕೊಳ್ಳಲು ಕರೆ ನೀಡಿದರು. 'ಆಧಾರ್' ಅನೇಕ ಉಪಕ್ರಮಗಳ ಆಧಾರವಾಗಿದೆ. ಜೀವನವನ್ನು ಮತ್ತಷ್ಟು ಸುಧಾರಿಸುವತ್ತ ಕೇಂದ್ರ ಸರ್ಕಾರವು ಪ್ರಾಥಮಿಕ ಗಮನ ಹೊಂದಿದೆ ಎಂದ ಅವರು, 'ಆಧಾರ್' ಮುಖ ದೃಢೀಕರಣದ ಉದಾಹರಣೆಯನ್ನು ಮತ್ತು ಅದು ಹೇಗೆ ಸಕ್ರಿಯಗೊಳಿಸುತ್ತದೆ ಎಂಬುದನ್ನು ವಿವರಿಸಿದರು. ಸುಮಾರು ೭೫೦ ಹಿರಿಯ ನೀತಿ ನಿರೂಪಕರು, ತಜ್ಞರು, ತಂತ್ರಜ್ಞರು, ಮತ್ತು ವೃತ್ತಿಪರರು 'ಆಧಾರ್ ಸಂವಾದದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ವೇಳೆ ಸುರಕ್ಷಿತ ಡಿಜಿಟಲ್ ದೃಢೀಕರಣ ಮತ್ತು ಕ್ಯುಆರ್‌ಕೋಡ್ ಆಧಾರಿತ ದತ್ತಾಂಶ ಹಂಚಿಕೆಗಾಗಿ ನೂತನ ಆಧಾರ ಆಪ್ ಅನ್ನು ಯುಐಡಿಎಐ ಅನಾವರಣಗೊಳಿಸಿದೆ.

<><*<><>*><>

ಸರ್ಕಾರವು ತನ್ನ ನೋಡಲ್ ಸಂಸ್ಥೆ ಮೂಲಕ ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ೧೦೦ ಲಕ್ಷ ಬೇಲ್ ಹತ್ತಿಯನ್ನು ಖರೀದಿಸಿದೆ.

ಈ ಖರೀದಿಯು ಒಟ್ಟು ಹತ್ತಿಯ ೨೬೩ ಲಕ್ಷ ಬೇಲ್‌ಗಳಲ್ಲಿ ೩೮ ಪ್ರತಿಶತ ಮತ್ತು ದೇಶದಲ್ಲಿ ಅಂದಾಜು ಒಟ್ಟು ಹತ್ತಿ ಉತ್ಪಾದನೆಯ ೨೯೪.೨೫ ಲಕ್ಷ ಬೇಲ್‌ಗಳಲ್ಲಿ ೩೪ ಪ್ರತಿಶತವನ್ನು ಹೊಂದಿದೆ. ತೆಲಂಗಾಣವು ೪೦ ಲಕ್ಷ ಬೇಲ್‌ಗಳೊಂದಿಗೆ ಅತಿ ಹೆಚ್ಚು ಖರೀದಿ ದಾಖಲಿಸಿದ್ದು, ೩೦ ಲಕ್ಷ ಬೇಲ್‌ಗಳೊಂದಿಗೆ ಮಹಾರಾಷ್ಟ್ರವು ಮತ್ತು ೧೪ ಲಕ್ಷ ಬೇಲ್‌ಗಳೊಂದಿಗೆ. ಗುಜರಾತ್ ಹೆಚ್ಚು ಬೇಲ್ ಖರೀದಿಸಿರುವ ರಾಜ್ಯಗಳಾಗಿವೆ. ಇನ್ನು ಕರ್ನಾಟಕ, ಮಧ್ಯಪ್ರದೇಶ, ಆಂಧ್ರಪ್ರದೇಶ, ಒಡಿಶಾದಲ್ಲೂ ಗಮನಾರ್ಹ ಖರೀದಿ ಕಂಡುಬಂದಿದೆ. ಹರಿಯಾಣ, ರಾಜಸ್ಥಾನ ಮತ್ತು ಪಂಜಾಬ್‌ನಲ್ಲಿ ೧.೧೫ ಲಕ್ಷ ಬೇಲ್‌ಗಳ ಖರೀದಿಯಾಗಿದೆ. ಹತ್ತಿ ಉತ್ಪಾದಿಸುವ ಎಲ್ಲಾ ರಾಜ್ಯಗಳಲ್ಲಿ ಸುಮಾರು ೨೧ ಲಕ್ಷ ಹತ್ತಿ ರೈತರಿಗೆ ಒಟ್ಟು ೩೭ ಸಾವಿರದ ೪೫೦ ಕೋಟಿ ರೂಪಾಯಿಗಳನ್ನು ಪಾವತಿಸಲಾಗಿದೆ ಎಂದು ಜವಳಿ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

<><*<><>*><>

ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲಿನ ಶೇಕಡ ೧೦೪ ರಷ್ಟು ಸುಂಕಗಳು ಇಂದು ಜಾರಿಗೆ ಬರಲಿವೆ ಎಂದು ಅಮೆರಿಕ ತಿಳಿಸಿದೆ.  ಆರಂಭದಲ್ಲಿ, ಅಧ್ಯಕ್ಷ ಟ್ರಂಪ್ ಅವರ ಪ್ರತಿಸುಂಕ ಪ್ಯಾಕೇಜ್‌ನ ಭಾಗವಾಗಿ ಚೀನಾ ಶೇಕಡ ೩೪ ರಷ್ಟು ಸುಂಕ ಹೆಚ್ಚಳವನ್ನು ಎದುರಿಸಬೇಕಾಗಿತ್ತು. ಆದಾಗ್ಯೂ, ಅಮೆರಿಕದ ಸರಕುಗಳ ಮೇಲೆ ಶೇಕಡ ೩೪ ರಷ್ಟು ಪ್ರತೀಕಾರದ ಸುಂಕವನ್ನು ವಿಧಿಸುವ ಭರವಸೆಯನ್ನು ಹಿಂತೆಗೆದುಕೊಳ್ಳಲು ಚೀನಾ ನಿರಾಕರಿಸಿದ ನಂತರ, ಅಮೆರಿಕ ಅಧ್ಯಕ್ಷರು ಹೆಚ್ಚುವರಿ ಶೇಕಡ ೫೦ ರಷ್ಟು ಸುಂಕಗಳನ್ನು ಸೇರಿಸುವ ಮೂಲಕ ಪರಿಸ್ಥಿತಿಯನ್ನು ಉಲ್ಬಣಗೊಳಿಸಿದರು. ಇದು ಚೀನಾದ ಮೇಲಿನ ಒಟ್ಟು ಸುಂಕ ಹೆಚ್ಚಳವನ್ನು ಶೇಕಡ ೮೪ ಕ್ಕೇರಿಸಿದೆ.

<><*<><>*><>

ಭಾರತದ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಪ್ರತಿ ಸುಂಕಗಳ ಬಗ್ಗೆ ಎಚ್ಚರಿಕೆಯಿಂದ ವಿಶ್ಲೇಷಣೆ ನಡೆಸಬೇಕು ಎಂದು ಕೇಂದ್ರ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಕರೆ ಅಭಿಪ್ರಾಯಪಟ್ಟಿದ್ದಾರೆ. ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,  ಸುಂಕಗಳ ಬಗ್ಗೆ ಯಾವುದೇ ಆತುರದ ನಿರ್ಧಾರ ತೆಗೆದುಕೊಳ್ಳುವ ಮೊದಲು ಬದಲಾಗುತ್ತಿರುವ ಬೆಳವಣಿಗೆಗಳು ಸ್ಪಷ್ಟರೂಪ ತಳೆಯಲು ಅವಕಾಶ ನೀಡಬೇಕು ಎಂದರು. ಸುಂಕಗಳು ಬಹು ಉದ್ದೇಶವನ್ನು ಪೂರೈಸುತ್ತವೆ. ಅವು ವೈವಿಧ್ಯಮಯ ಪರಿಣಾಮಗಳನ್ನು ಉಂಟುಮಾಡಬಹುದು. ಹಾಗಾಗಿ ಎಚ್ಚರಿಕೆಯಿಂದ, ಸೂಕ್ತ ತಿಳುವಳಿಕೆಯಿಂದ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಅಗತ್ಯ.  ವಾಣಿಜ್ಯ ಸಚಿವಾಲಯವು ಪರಿಸ್ಥಿತಿಯನ್ನು ನಿಕಟವಾಗಿ ಪರಿಶೀಲಿಸುತ್ತಿದೆ ಎಂದು ತಿಳಿಸಿದರು. ಸುಂಕಗಳ ಕುರಿತಂತೆ ಪ್ರತಿಪಕ್ಷ ಕಾಂಗ್ರೆಸ್ ಹೇಳಿಕೆಯನ್ನು ಸಚಿವರು ಟೀಕಿಸಿದರು. ಸುಂಕಗಳ ಕುರಿತು ಯಾವುದೇ ಹೇಳಿಕೆ ನೀಡುವ ಮೊದಲು ಅವುಗಳ ಸ್ವರೂಪ ಹಾಗೂ ಪರಿಣಾಮಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಪಡೆಯಬೇಕು ಎಂದು ಹೇಳಿದರು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ನೈಸರ್ಗಿಕ ಅನಿಲ ಹಾಗೂ ಕಚ್ಚಾತೈಲ ಬೆಲೆಗಳಲ್ಲಿನ ಕುಸಿತದ ಬಗ್ಗೆ ಮಾತನಾಡಿದ ಸಚಿವ ಹರ್ದೀಪ್ ಸಿಂಗ್ ಪುರಿ, ಬದಲಾಗುತ್ತಿರುವ ಪರಿಸ್ಥಿತಿ ನಿಭಾಯಿಸಲು ತೈಲ ಮಾರುಕಟ್ಟೆ ಸಂಸ್ಥೆಗಳು ಸಾಕಷ್ಟು ಸಮಯ ಹೊಂದಿದೆ ಎಂದು ತಿಳಿಸಿದರು.

<><*<><>*><>

ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ೭.೭ ತೀವ್ರತೆಯ ಭೂಕಂಪದಲ್ಲಿ ಸಾವನ್ನಪ್ಪಿದವರ ಸಂಖ್ಯೆ ೩ ಸಾವಿರದ ೬೪೫ ಕ್ಕೆ ಏರಿದೆ, ಈವರೆಗೆ ೫ ಸಾವಿರದ ೧೭ ಜನರು ಗಾಯಗೊಂಡಿದ್ದು, ೧೪೮ ಜನರು ಇನ್ನೂ ನಾಪತ್ತೆಯಾಗಿದ್ದಾರೆ ಎಂದು ಮ್ಯಾನ್ಮಾರ್  ಆಡಳಿತ ಮಂಡಳಿ ಮಾಹಿತಿ ನೀಡಿದೆ. ದೇಶಾದ್ಯಂತ ೫ ಲಕ್ಷಕ್ಕೂ ಹೆಚ್ಚು ಜನರಿಗೆ ಜೀವ ಉಳಿಸುವ ಆರೋಗ್ಯ ಸೇವೆಗಳು ಲಭ್ಯವಿಲ್ಲ ಎಂದು ವಿಶ್ವಸಂಸ್ಥೆಯ ಮಾನವೀಯ ವ್ಯವಹಾರಗಳ ಸಮನ್ವಯ ಕಚೇರಿ ವರದಿ ಮಾಡಿದೆ. ಏತನ್ಮಧ್ಯೆ, ಭಾರತ ತನ್ನ 'ನೆರೆಹೊರೆ ಮೊದಲು' ಮತ್ತು 'ಪೂರ್ವಕ್ಕೆ ಕ್ರಮ' ನೀತಿಗಳಿಗೆ ಅನುಗುಣವಾಗಿ 'ಆಪರೇಷನ್ ಬ್ರಹ್ಮ'ವನ್ನು ಪ್ರಾರಂಭಿಸಿ, ವಿಪತ್ತಿಗೆ ಪ್ರತಿಕ್ರಿಯಿಸಿದ ಮೊದಲ ರಾಷ್ಟ್ರವಾಗಿದೆ. ಕಾರ್ಯಾಚರಣೆಯಡಿಯಲ್ಲಿ, ಭಾರತವು ಮ್ಯಾನ್ಮಾರ್‌ಗೆ ವೈದ್ಯಕೀಯ ಮತ್ತು ಪರಿಹಾರ ಸಾಮಗ್ರಿಗಳನ್ನು ರವಾನಿಸಿದೆ.

<><*<><>*><>

ಅರ್ಜೆಂಟೀನಾದಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ ಪುರುಷರ ೨೫ ಮೀಟರ್ ರ್‍ಯಾಪಿಡ್ ಫೈಯರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ವಿಜಯ್‌ವೀರ್ ಸಿಧು ಚಿನ್ನದ ಪದಕ ಗೆದ್ದಿದ್ದಾರೆ.  ಆ ಮೂಲಕ ಈ ಪ್ರತಿಷ್ಠಿತ ಟೂರ್ನಿಯ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯರಾಗಿದ್ದಾರೆ. ಮಹಿಳಾ ವಿಭಾಗದ ೧೦ ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಸುರಚಿ ಸಿಂಗ್ ಚಿನ್ನ ಗೆದ್ದಿದ್ದಾರೆ. ಈ ಎರಡು ಪದಕಗಳ ಬಳಿಕ ಭಾರತ ಟೂರ್ನಿಯಲ್ಲಿ ಒಟ್ಟು ೪ ಚಿನ್ನ, ೧ ಬೆಳ್ಳಿ ಹಾಗೂ ೧ ಕಂಚಿನ ಪದಕದೊಂದಿಗೆ ಅಂಕ ಪಟ್ಟಿಯಲ್ಲಿ ಅಗ್ರ ಸ್ಥಾನಕ್ಕೇರಿದೆ.

<><*<><>*><>

ಚಂಡೀಗಢದಲ್ಲಿ ಕಳೆದ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ, ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ೧೮ ರನ್‌ಗಳಿಂದ ಪರಾಭವಗೊಳಿಸಿತು. ಟಾಸ್ ಗೆದ್ದು, ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ತಂಡ, ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೨೧೯ ರನ್ ಗಳಿಸಿತು. ಪಂಜಾಬ್ ಪರ ಪ್ರಿಯಾಂಶ್ ಆರ್ಯ ೧೦೩ ರನ್,

ಶಶಾಂಕ್ ಸಿಂಗ್ ಅಜೇಯ ೫೨ ರನ್ ಗಳಿಸುವ ಮೂಲಕ ತಂಡ ಬೃಹತ್ ಮೊತ್ತ ಕಲೆ ಹಾಕುವಲ್ಲಿ ನೆರವಾದರು.  ಚೆನ್ನೈ ಪರ ಲಾಕಿ ಫರ್ಗುಸನ್ ಎರಡು ವಿಕೆಟ್ ಪಡೆದರು. ಇದಕ್ಕೆ ಉತ್ತರವಾಗಿ, ಚೆನ್ನೈ ಸೂಪರ್ ಕಿಂಗ್ಸ್ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೨೦೧ ರನ್ ಗಳಿಸಲಷ್ಟೇ ಶಕ್ತವಾಯಿತು, ಚೆನ್ನೈ ಪರ ಡೆವೊನ್ ಕಾನ್ವೇ ೬೯ ರನ್ ಗಳಿಸಿದರು. ಪಂಜಾಬ್ ಪರ ಖಲೀಲ್ ಅಹ್ಮದ್ ಮತ್ತು ರವಿಚಂದ್ರನ್ ಅಶ್ವಿನ್ ತಲಾ ಎರಡು ವಿಕೆಟ್ ಪಡೆದರು. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಹಾಗೂ ರಾಜಸ್ಥಾನ ತಂಡಗಳು ಸೆಣಸಲಿವೆ. ಪಂದ್ಯ ರಾತ್ರಿ ೭:೩೦ ಕ್ಕೆ ಆರಂಭವಾಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಗಂಟೆಗೆ <>*><>**